ಸುತಗಟ್ಟಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ

೧೦೬೯. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯಿತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮಕ್ಕೆ ಎನ್‌ಆರ್‌ಡಬ್ಲ್ಯೂಎಸ ಯೋಜನೆ ಯಾವಾಗ ಮಂಜೂರು ಆಯಿತು.

ಆ) ಆ ಯೋಜನೆಗೆ ಮಂಜೂರಾದ ಹಣವೆಷ್ಟು ಮತ್ತು ಈಗ ಆ ಕೆಲಸವು ಯಾವ ಹಂತದಲ್ಲಿದೆ?

ಇ) ಆ ಕೆಲಸವನ್ನು ಪೂರ್ಣ ಮುಗಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯಿತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು). —

ಅ) ೧೬-೫-೧೯೮೭ ರಂದು ಮಂಜೂರಾಗಿದೆ.

ಆ) ಮಂಜೂರಾದ ಹಣ ೮,೭೯,೩೦೦ ರೂಗಳು. ಜಾಕ್‌ವೆಲ್ ಮೂಲವನ್ನಾಗಿ ಪರಿವರ್ತಿಸಿ ಪೈಪ್ ಲೈನಿನ ಕೆಲಸವನ್ನು ಪ್ರಾರಂಭಿಸಲಾಗಿದೆ ಮತ್ತು ಮೇಲ್‌ಮಟ್ಟದ ಜಲಾಶಯದ ಕೆಲಸ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಫೆಬ್ರುವರಿ ೮೮ರ ಅಂತ್ಯದವರೆಗೆ ೪೨ ಸಾವಿರ ರೂಗಳು ಖರ್ಚಾಗಿರುತ್ತದೆ. ೮೮-೮೯ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಯೋಜನೆ ಪೂರ್ಣಗೊಳಿಸಲು ಬೇಕಾದಷ್ಟು ಹಣವನ್ನು ಒದಗಿಸಿ ೧೯೮೯ರ ಅಂತ್ಯದಲ್ಲಿ ಯೋಜನೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಮಾಟಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ

೧೦೮೦. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯಿತ್‌ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಳಗಾವಿ ಜಿಲ್ಲೆ ಸೌಂದತ್ತಿ ತಾಲ್ಲೂಕಿನ ಮಾಟಳ್ಳಿ ಗ್ರಾಮಕ್ಕೆ ಎನ್‌ಆರ್‌ಡಬ್ಲ್ಯೂಎಸ್ ಯೋಜನೆಯು ಯಾವಾಗ ಮಂಜೂರಾಯಿತು ?

ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು ಮತ್ತು ಈಗ ಆ ಕೆಲಸವು ಯಾವ ಹಂತದಲ್ಲಿದೆ?

ಇ) ಆ ಕೆಲಸವನ್ನು ಪೂರ್ಣ ಮುಗಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ದಿನಾಂಕ ೧೬-೧೧-೧೯೮೯ ರಲ್ಲಿ ಮಂಜೂರಾಯಿತು.

ಆ) ಈ ಯೋಜನೆಗೆ ಮಂಜೂರಾದ ಹಣ ರೂ. ೧,೩೧,೩೦೦. ಈ ಯೋಜನೆಯ ಜಲ ಮೂಲವನ್ನು ಸ್ಥಾಪಿಸಲಾಗಿದೆ. ಪೈಪ್ ಲೈನ್ ಕೆಲಸವು ಪ್ರಗತಿಯಲ್ಲಿದ್ದು ಮೇಲ್ಮಟ್ಟದ ಜಲ ಸಂಗ್ರಹಾಲಯದ ಕೆಲಸ ಪ್ರಾರಂಭಿಕ ಹಂತದಲ್ಲಿದೆ.

ಇ) ಈ ಯೋಜನೆಗೆ ಫೆಬ್ರುವರಿ ೮೮ರ ಅಂತ್ಯದವರೆಗೆ ೯೫,೦೦೦ ರೂ.ಗಳನ್ನು ಖರ್ಚು ಮಾಡಲಾಗಿದೆ. ಜೂನ್ ೮೮ ರೊಳಗಾಗಿ ಕೊಳವೆ ಮೂಲಕ ನೇರವಾಗಿ ನೀರಂ ಸರಬರಾಜಂ ಮಾಡಲಾಗುಲಾಗುವುದು. ೧೯೮೮-೮೯ ನೇ ಸಾಲಿನಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.